ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 376/2019
ಪಿ.ಡಬ್ಲ್ಯೂ ಃ 1

ದಿನಾಂಕಃ 27-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಸಿ ಆರ್ ಪಿ ವಕೀಲರಿಂದ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಕೂಲಿ ಕೆಲಸ ಮಾಡುತ್ತಿರುತ್ತೇನೆ. ಸ್ಥಳ ಕೋಣಿ. 1 ನೇ ವಾದಿ ನನ್ನ ತಾಯಿ. ನನ್ನ ತಂದೆ ಶೀನ ಗಾಣಿಗ. ನನ್ನ ತಂದೆ ತಾಯಿಗೆ ಮುತ್ತು, ರತ್ನ, ಚಂದ್ರ ಮತ್ತು ಶೇಖರ ಎಂಬ ನಾಲ್ಕು ಜನ ಮಕ್ಕಳು. 6-7 ವರ್ಷಗಳ ಹಿಂದೆ ಚಂದ್ರ ಗಾಣಿಗರು ಮೃತರಾಗಿರುತ್ತಾರೆ, ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ.

2. ನಾನು ದಾವಾ ಆಸ್ತಿಗಳು ಶೀನ ಗಾಣಿಗರಿಗೆ ಪಾಲಿನಲ್ಲಿ ಬಂದಂತಹ ಆಸ್ತಿಗಳ ಮೇಲೆ ಪಾಲು ಕೇಳುತ್ತಿರುತ್ತೇನೆ. ಒಂದು 8 ಸೆಂಟ್ಸ್, ಒಂದು 40 ಸೆಂಟ್ಸ್ ಹಾಗೂ 14 ಸೆಂಟ್ಸ್. 21 ಸೆಂಟ್ಸ್ ನನ್ನ ಅಮ್ಮ ನನಗೆ ಬರೆದುಕೊಟ್ಟಿರುತ್ತಾಳೆ. ನನ್ನ ತಂದೆಗೆ 8 ಸೆಂಟ್ಸ್ ಹಾಗೂ 40 ಸೆಂಟ್ಸ್ ಜಾಗವನ್ನು ಹೊರತುಪಡಿಸಿ ಬೇರೆ ಜಾಗವೂ ಇತ್ತು, ಆದರೆ ಆ ಜಾಗಗಳ ಬಗ್ಗೆ ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಬೇರೆ ಆಸ್ತಿಗಳನ್ನು ಸೇರಿಸಿರುವುದಿಲ್ಲ. ಹಂಗಳೂರಿನಲ್ಲಿ ನಮ್ಮ ತಂದೆಗೆ ಜಾಗ ಇತ್ತು, ಆದರೆ ನಮಗೆ ಏನೂ ಕೊಡಲಿಲ್ಲ, ಏನಾಯಿತೋ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ 1984 ರಲ್ಲಿ ಪಾಲು ಸಿಕ್ಕಿರುತ್ತದೆ. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ಯಾವುದೇ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ.

3. ನಮ್ಮ ಜಾಗ 1974 ರಲ್ಲೇ ಡಿಕ್ಲರೇಷನ್ ಮೂಲಕ ಬೇರೆಯವರಿಗೆ ಹೋಗಿರುತ್ತದೆ, ಪಾಲಾದ ನಂತರ ಯಾವುದೂ ಹೋಗಿರುವುದಿಲ್ಲ. ಮುತ್ತುರವರು ದೊಡ್ಡವರು, ಎರಡನೇಯಳು ನಾನು, ಮೂರನೇಯವರು ಚಂದ್ರ. ನಾಲ್ಕನೇಯವರು ಶೇಖರ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿಯೂ ಕೂಲಿ ಕೆಲಸ ಮಾಡುತ್ತಿದ್ದರು. ಕೂಲಿಯಿಂದ ಬಂದಂತಹ ದುಡ್ಡಿನಲ್ಲೇ ನಮ್ಮ ಮನೆ ನಡೆಯುತ್ತಿತ್ತು ಎಂದರೆ ಸರಿ. ಅವರಿಗೆ ಬಂದ ಆದಾಯ ಪಾಲಿನಲ್ಲಿ ಜಮೀನಿನಿಂದಲ್ಲೇ ಬಂದಿರುತ್ತದೆ ಎಂದರೆ ಸರಿ.

4. 21 ಸೆಂಟ್ಸ್ ನಾನು ಮನೆ ಕಟ್ಟಿಸಿಕೊಂಡಿರುತ್ತೇನೆ. 7 ವರ್ಷ ನಮ್ಮ ತಾಯಿಯನ್ನು ಮಲಗಿದ್ದಲ್ಲೇ ನೋಡಿಕೊಂಡಿರುತ್ತೇನೆ. ಆಕೆ ನನಗೆ ಬರೆದುಕೊಟ್ಟಿರುತ್ತಾಳೆ. 1 ನೇ ವಾದಿ

ಇತ್ತೀಚೆಗೆ ಮೃತರಾಗಿರುತ್ತಾರೆ. ಚಂದ್ರನ ಹೆಂಡತಿ ಪ್ರತಿವಾದಿ 3 ವಾಸವಿರುವ 15 ಸೆಂಟ್ಸ್ ಜಾಗವನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. ಚಂದ್ರನ ಮಕ್ಕಳು ಪ್ರತಿವಾದಿ 4 ರಿಂದ 6 ಎಂದರೆ ಸರಿ. ನನ್ನ ತಾಯಿ ಖರೀದಿ ಮಾಡಿದ ಎರಡೂ ಜಾಗಗಳು ಬೇರೆ ಬೇರೆ ಇದ್ದವು. ನನ್ನ ತಾಯಿ ಲಕ್ಷ್ಮಿ ಗಾಣಿಗರವರ ತಂದೆ ಸುಬ್ಬ ಗಾಣಿಗ. ಲಕ್ಷ್ಮೀ ಗಾಣಿಗರಿಗೆ ತಂದೆ ಮನೆಯಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ. ಪಾಲು ಪಟ್ಟಿಯಲ್ಲಿ ಶೀನ ಗಾಣಿಗರವರಿಗೆ ಬಂದಂತಹ ಆಸ್ತಿ ನಮ್ಮ ಕುಟುಂಬದ ಆಸ್ತಿ. ನಮಗೆ 21 ಸೆಂಟ್ಸ್ ಜಾಗ ಬಿಟ್ಟು ಉಳಿದ ಜಾಗದಲ್ಲಿ ನಾಲ್ಕು ಭಾಗ ಆಗಬೇಕು ಎಂದು ನುಡಿಯುತ್ತಾರೆ.

5. ಲಕ್ಷ್ಮೀ ಗಾಣಿಗ ನನ್ನ ತಾಯಿ ಮೃತರಾಗುವಾಗ ಯಾವುದೇ ವಿಲ್ ಮಾಡಿ ಹೋಗಿರುವುದಿಲ್ಲ. ಯಾವ ವರ್ಷದಲ್ಲಿ ನನ್ನ ತಾಯಿ ಹುಷಾರಿರಲಿಲ್ಲ ಎಂದು ನನಗೆ ಹೇಳಲು ಬರುವುದಿಲ್ಲ, ನನ್ನ ತಾಯಿಗೆ ಚಿಕಿತ್ಸೆ ಕೊಡಿಸಿ 7 ವರ್ಷ ಆಕೆ ಬದುಕಿದ್ದಳು. ನಿಪಿ.2 ನಮ್ಮ ತಾಯಿ ನನಗೆ ಮಾಡಿಕೊಟ್ಟ ವ್ಯವಸ್ಥಾ ಪತ್ರ. ವ್ಯವಸ್ದಾ ಪತ್ರದ ಮೂಲ ಪ್ರತಿ ನನ್ನ ತಮ್ಮನ ಹತ್ತಿರ ಇರುತ್ತದೆ.

6.ವೆಂಕಟರಮಣ ಶೇರಿಗಾರರ ಮಗ ಜಯಚಂದ್ರ ರವರ ಬಗ್ಗೆ ಗೊತ್ತಿಲ್ಲ, ನನ್ನ ತಾಯಿಗೆ ಗೊತ್ತಿತ್ತೋ ಏನೋ ನನಗೆ ಗೊತ್ತಿಲ್ಲ, ವಾಸಪ್ಪಣ್ಣ ಮೃತರಾಗಿರುತ್ತಾರೆ. ಅವರು ನಿಪಿ.2 ಕ್ಕೆ ಸಾಕ್ಷಿಯಾಗಿರುತ್ತಾರೆ. ಅವರ ಮನೆಯಲ್ಲಿ ಏನು ಕೆಲಸ ಇದ್ದರೂ ಕರೆಯುತ್ತಿದ್ದರು. 21 ಸೆಂಟ್ಸ್ ನಮ್ಮ ಕುಟುಂಬದ ಆಸ್ತಿ, ಅದು ಪಾಲಾಗಬೇಕು ಎಂದರೆ ಸರಿಯಲ್ಲ. ಸಾಕ್ಷಿ ಅದು ನನಗೆ ನನ್ನ ಅಮ್ಮನಿಂದ ಬಂದ ಆಸ್ತಿ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ